

ದಮಯಂತಿ

## ರಾಜವರ್ಮ

ಅಣ್ಣ ರವಿವರ್ಮ ಬರೋಡಾದಿಂದ ಬಂದ ಮೇಲೆ ಚಿತ್ರಪಟಗಳ ಮುದ್ರಣಾಲಯ (ಪ್ರಿಂಟಿಂಗ್ ಪ್ರೆಸ್) ಆರಂಭಿಸಬೇಕೆಂದು ತೀವ್ರವಾಗಿ ಯೋಚಿಸತೊಡಗಿದರು. ದಿವಾನ್ ಮಾಧವರಾಯರು ಬದುಕಿದ್ದಾಗ ಅಣ್ಣನಿಗೊಮ್ಮೆ ಹೇಳಿದ್ದರು 'ವರ್ಮಾಜಿ! ಈ ನಿಮ್ಮ ಕಲೆ ವಿಶ್ವವ್ಯಾಪಿಯಾಗುತ್ತಿದೆ ನಿಜ. ದೇಶವಿದೇಶಗಳಿಂದ ಹೊಗಳಿಕೆಪುರಸ್ಕಾರಗಳು ಬರುತ್ತಿವೆ. ಆದರೆ ನನ್ನ ಉದ್ದೇಶವೇ ಬೇರೆ. ನಿಮ್ಮ ಕಲೆ ಜನಸಾಮಾನ್ಯರನ್ನು ತಲುಪಬೇಕು. ಬಡವ ಬಲ್ಲಿದ ಭೇದವಿಲ್ಲದೆ ಪ್ರತಿಯೊಬ್ಬರ ಮನೆಯಲ್ಲೂ ನಿಮ್ಮ ಕಲೆ ರಾರಾಜಿಸಬೇಕು. ಇದಕ್ಕೆ ನೀವು ಜರ್ಮನ್ನರ ಸಹಾಯ ಪಡೆದುಕೊಂಡು ಚಿತ್ರಕಲೆಯ ಮುದ್ರಣ ಆರಂಭಿಸಬೇಕು' ಎಂದಿದ್ದರು ದಿವಾನರು ಬೊಂಬಾಯಿಗೆ ಬಂದಾಗ. ಬರೋಡಾದಿಂದ ನಾವು ಬೊಂಬಾಯಿಗೆ ಬಂದ ನಂತರ ಅಣ್ಣನ ಚಿಂತನೆ ಈ ದಿಸೆಯಲ್ಲಿ ಹೋಗಲು ಮತ್ತೊಂದು ಕಾರಣ ಮಹಾರಾಜ ಸಯ್ಯಾಜಿರಾಯರ ಒತ್ತಾಯ. ತಾವೇ ಸ್ವತಃ ಜರ್ಮನ್‌ರ ತಂತ್ರಜ್ಞಾನಿಗಳ ಸಹಾಯವನ್ನು ಕಲ್ಪಿಸಿಕೊಡುವುದಾಗಿ ಆಶ್ವಾಸನೆಯಿತ್ತರು.

ದಾದಾಬಾಯಿ ನವರೋಜಿ, ಜಸ್ಟಿಸ್ ರ್‍ಯಾನಡೆ, ಗೋವರ್ಧನದಾಸ್ ಮಾಖನ್‌ಜೀ ಮುಂತಾದವರ ನೆರವಿನೊಂದಿಗೆ ಒಂದು ಮುದ್ರಣಾಲಯವನ್ನು ನಮ್ಮ ಭಾಟಿಯಾ ಬಂಗ್ಲೆಯಲ್ಲಿಯೇ ಪ್ರಾರಂಭಿಸಲು ನಿರ್ಧರಿಸಿದೆವು. ಅದಕ್ಕಾಗಿ ಅಣ್ಣನಿಗೆ ಬರೋಡಾ ಮಹಾರಾಜರು ನೀಡಿದ 50,000 ನಗದು ಹಣವನ್ನೇ ಮೂಲಧನವನ್ನಾಗಿಟ್ಟು ಜರ್ಮನಿಯಿಂದ ಮುದ್ರಣದ ಯಂತ್ರಗಳನ್ನು ತರಿಸಿಕೊಂಡೆವು.

ಹೀಗೆ ಪ್ರಾರಂಭವಾಯಿತು ಅಣ್ಣನ 'ಕ್ಯಾಲೆಂಡರ್ ಆರ್ಟ್', ಜರ್ಮನಿಯಿಂದ ನಮ್ಮ ನೆರವಿಗೆ ಆಗಮಿಸಿದರು ಮಿಸ್ಟರ್ ಸ್ಕೈಚರ್ ಎಂಬ ಯಂತ್ರಜ್ಞರು. ಬಂದವರು ಅಣ್ಣನ ಚಿತ್ರಗಳನ್ನು ನೋಡಿ ಪ್ರಶಂಶಿಸಿ, ಅವುಗಳನ್ನು ಮುದ್ರಣದ ದೃಷ್ಟಿಯಿಂದ ಕಡಿಮೆ ಬಣ್ಣಗಳನ್ನು ಉಪಯೋಗಿಸಿ, ಪುನಃ ರಚಿಸಬೇಕೆಂದು ಸಲಹೆಯಿತ್ತರು. ಹೀಗೆ